# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ಜನವರಿ ೦೪, ೨೦೨೪ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೪ನೇ (ವಿಶೇಷ) ಸಭೆಯ ನಡವಳಿಗಳು

೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು
೦೨. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು
೦೩. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ : ಸದಸ್ಯರು
೦೪. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೫. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ : ಸದಸ್ಯರು
೦೬. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೭. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ : ವಿಶೇಷ ಆಹ್ವಾನಿತರು

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

೦೮. ಡಾ. ವಿಜಯ್ ಪೂಣಚ್ಚ ತಂಬಂಡ, ಕುಲಸಚಿವರು, ಕವಿಹಂ : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು : ಸದಸ್ಯರು
೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು
೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ೨೦.೧೨.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೩ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೨೦.೧೨.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೩ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ೨೦.೧೨.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೩ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೨೦.೧೨.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೩ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಸಭೆಯು ಈ ಕೆಳಗಿನಂತೆ ಕ್ರಮಕೈಗೊಳ್ಳಲು ಸೂಚಿಸಿತು.

ಕಾರ್ಯಕಾರಿ ಸಮಿತಿಯ ನಿರ್ಣಯಗಳ ಉದ್ಧೃತ ಭಾಗಗಳನ್ನು ಸಂಬಂಧಿಸಿದ ವಿಭಾಗಗಳು ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸಿ ಅನುಪಾಲನೆಯನ್ನು ನೀಡಲು ಸೂಚಿಸಲಾಗುತ್ತಿದೆ. ಆದರೆ ಕೆಲವು ವಿಭಾಗಗಳು ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸದೇ ಕ್ರಮ ಕೈಗೊಳ್ಳಲಾಗುವುದು, ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅನುಪಾಲನೆ ಸಲ್ಲಿಸುತ್ತಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಲಾಯಿತು. ಇನ್ನು ಮುಂದೆ ಸಂಬಂಧಿಸಿದ ವಿಭಾಗಗಳು ನಿರ್ಣಯಗಳನ್ನು ಕಡ್ಡಾಯವಾಗಿ ಸೂಕ್ತ ಪ್ರಾಧಿಕಾರಗಳ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು. ಹೀಗೆ ಅನುಷ್ಠಾನಗೊಳಿಸಿದ ದಾಖಲೆಗಳೊಂದಿಗೆ ಅನುಪಾಲನೆಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಸಭೆಯು ನಿರ್ಣಯಿಸಿತು. ಕುಲಸಚಿವರು ಈ ಕುರಿತ ದಾಖಲೆಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

೨೨೪.೦೧ ೩೨ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ದಿನಾಂಕ ೧೦.೦೧.೨೦೨೪ರಂದು ನಡೆಯಲಿರುವ ೩೨ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ವಿದ್ಯಾರ್ಥಿಗಳು ಪಡೆಯುವ ಈ ಕೆಳಗಿನ ವಿವಿಧ ಕೋರ್ಸ್‌ಗಳ ಒಟ್ಟು **೨೭೬** ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

| ಕ್ರ ಸಂ | ನಿಕಾಯ | ಪದವಿ | | ಒಟ್ಟು |
|---|---|---|---|---|
| | | ಪಿಎಚ್.ಡಿ. | ಡಿ.ಲಿಟ್. | |
| ೧ | ಭಾಷಾ ನಿಕಾಯ | ೧೦೪ | – | ೧೦೪ |
| ೨ | ಸಮಾಜ ವಿಜ್ಞಾನಗಳ ನಿಕಾಯ | ೧೬೭ | – | ೧೬೭ |
| ೩ | ಲಲಿತಕಲೆಗಳ ನಿಕಾಯ | ೦೪ | ೦೧ | ೦೫ |
| | ಒಟ್ಟು | ೨೭೫ | ೦೧ | ೨೭೬ |

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಮೇಲಿನ ವಿವಿಧ ಕೋರ್ಸ್‌ಗಳ ಒಟ್ಟು ೨೭೬ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಅನುಮೋದನೆ ನೀಡಿತು.

೨೨೪.೦೨ ೩೨ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರದ ಬಿ.ವಿ.ಎ. ಪದವಿ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ದಿನಾಂಕ ೧೦.೦೧.೨೦೨೪ರಂದು ನಡೆಯಲಿರುವ ೩೨ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರದ ೨೦೨೨–೨೩ನೇ ಸಾಲಿನ ವಿದ್ಯಾರ್ಥಿಗಳು ಪಡೆಯುವ ಈ ಕೆಳಗಿನ ವಿವಿಧ ಕೋರ್ಸ್‌ಗಳ ಒಟ್ಟು **೨೫೨** ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

| | |
|---|---|
| ೧. ಬಿ.ವಿ.ಎ. ಪದವಿ ಚಿತ್ರಕಲೆ (೩ ವರ್ಷದ) | ೯೭ |
| ೨. ಬಿ.ವಿ.ಎ. ಪದವಿ ಅನ್ವಯಿಕ ಕಲೆ (೩ ವರ್ಷದ) | ೦೧ |
| ೩. ಬಿ.ವಿ.ಎ. ಪದವಿ ಚಿತ್ರಕಲೆ (೪ ವರ್ಷದ) | ೧೫೧ |
| ೪. ಬಿ.ವಿ.ಎ. ಪದವಿ ಅನ್ವಯಿಕ ಕಲೆ (೪ ವರ್ಷದ) | ೦೩ |
| ಒಟ್ಟು | ೨೫೨ |

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಮೇಲಿನ ವಿವಿಧ ಕೋರ್ಸ್‌ಗಳ ಒಟ್ಟು ೨೫೨ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಅನುಮೋದನೆ ನೀಡಿತು.

೨೨೩.೦೩ ೩೨ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕುರಿತು.

ಟಿಪ್ಪಣಿ : ದಿನಾಂಕ ೧೦.೦೧.೨೦೨೪ರಂದು ನಡೆಯಲಿರುವ ೩೨ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ೨೦೨೦–೨೧ನೇ ಸಾಲಿನ ವಿದ್ಯಾರ್ಥಿಗಳು ಪಡೆಯುವ ಈ ಕೆಳಗಿನ ವಿವಿಧ ಕೋರ್ಸ್‌ಗಳ ಒಟ್ಟು **೪೨೩** ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ಎಂ.ಎ. ಸ್ನಾತಕೋತ್ತರ ಪದವಿ**

| | |
|---|---|
| ೧. ಎಂ.ಎ. ಕನ್ನಡ | ೧೪೫ |
| ೨. ಎಂ.ಎ. ಚರಿತ್ರೆ | ೧೪೫ |
| ೩. ಎಂ.ಎ. ಸಮಾಜಶಾಸ್ತ್ರ | ೮೦ |
| ೪. ಎಂ.ಜೆ.ಎಂ.ಸಿ.(ಎಂ.ಎ. ಪತ್ರಿಕೋದ್ಯಮ) | ೨೨ |
| ಒಟ್ಟು | ೩೯೨ |

**ಡಿಪ್ಲೊಮ ಕೋರ್ಸ್**

| | |
|---|---|
| ೧. ಪುರಾತತ್ವ ಡಿಪ್ಲೊಮ | ೦೯ |
| ೨. ಪತ್ರಿಕೋದ್ಯಮ ಡಿಪ್ಲೊಮ | ೧೬ |
| ೩. ನಾಟಕ ಕಲೆ ಡಿಪ್ಲೊಮ | ೦೬ |
| ಒಟ್ಟು | ೩೧ |

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಮೇಲಿನ ವಿವಿಧ ಕೋರ್ಸ್‌ಗಳ ಒಟ್ಟು ೪೨೩ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪದವಿಗಳನ್ನು ನೀಡಲು ಅನುಮೋದನೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೨೨೪.೦೪ ಕನ್ನಡ ವಿಶ್ವವಿದ್ಯಾಲಯದ ಕಟ್ಟಡಗಳಿಗೆ ಬಾಡಿಗೆ ನಿಗದಿಗೊಳಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣ, ಭುವನವಿಜಯ, ಪಂಪ ಸಭಾಂಗಣ ಹಾಗೂ ಡಾರ್ಮೆಟ್ರಿ ಕಟ್ಟಡಗಳನ್ನು ಸರ್ಕಾರದ/ಸ್ವಾಯತ್ತ ಸಂಸ್ಥೆಗಳಿಗೆ ಸಭೆ ಹಾಗೂ ಸಮಾರಂಭಗಳಿಗೆ, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ, ಶಿಬಿರಾರ್ಥಿಗಳಿಗೆ, ಕೋರ್ಸ್‌ವರ್ಕ್‌ನವರಿಗೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಬಾಡಿಗೆ ನಿಗದಿಗೊಳಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

| ಕ್ರಸಂ | ಕಟ್ಟಡದ ವಿವರ | ದಿನ ಒಂದಕ್ಕೆ ದರ |
|---|---|---|
| ೧ | ಮಂಟಪ ಸಭಾಂಗಣ<br>(ಸರ್ಕಾರ/ಸ್ವಾಯತ್ತತೆ ಸಂಸ್ಥೆಗಳ ಸಭೆ ಹಾಗೂ ಸಮಾರಂಭಗಳಿಗೆ) | ೫೦೦೦೦.೦೦ |
| ೨ | ಭುವನ ವಿಜಯ (ಸರ್ಕಾರ/ಸ್ವಾಯತ್ತತೆ ಸಂಸ್ಥೆಗಳ ಸಭೆ ಹಾಗೂ ಸಮಾರಂಭಗಳಿಗೆ) | ೩೦,೦೦೦.೦೦ |
| ೩ | ಪಂಪಸಭಾಂಗಣ (ಸರ್ಕಾರ/ಸ್ವಾಯತ್ತತೆ ಸಂಸ್ಥೆಗಳ ಸಭೆ ಹಾಗೂ ಸಮಾರಂಭಗಳಿಗೆ) | ೧೫೦೦೦.೦೦ |
| ೪ | ಡಾರ್ಮೆಟ್ರಿ (ವಿದ್ಯಾರ್ಥಿ/ಶಿಬಿರಾರ್ಥಿ/ಕೋರ್ಸ್‌ವರ್ಕ್ ವಿದ್ಯಾರ್ಥಿಗಳಿಗೆ)<br>i. ೧ ರಿಂದ ೧೦ನೇ ತರಗತಿ ವಿದ್ಯಾರ್ಥಿಗಳಿಗೆ ಒಬ್ಬರಿಗೆ<br>ii. ಹತ್ತನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಒಬ್ಬರಿಗೆ | <br>೧೦೦.೦೦<br>೨೦೦.೦೦ |

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಷರತ್ತುಗಳನ್ನು ವಿಧಿಸಿ ನಿಯಮಾನುಸಾರ ಬಾಡಿಗೆಯನ್ನು ನಿಗದಿಗೊಳಿಸಲು ಅನುಮೋದನೆ ನೀಡಿತು.

೨೨೪.೦೫ ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು ಇವರ ವರ್ಗಾವಣೆ ಕುರಿತು.

ಟಿಪ್ಪಣಿ : ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು ಇವರು ಕೌಟುಂಬಿಕ ಹಾಗೂ ಮಡದಿಯ ವೈದ್ಯಕೀಯ ಕಾರಣಗಳಿಂದಾಗಿ ಕನ್ನಡ ವಿಶ್ವವಿದ್ಯಾಲಯದಿಂದ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಳ್ಳುವ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ಕೋರಿ ದಿನಾಂಕ ೨೮.೧೨.೨೦೨೩ರ ಪತ್ರದ ಮೂಲಕ ಮಾನ್ಯ ಕುಲಪತಿಗಳಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿ ಕುರಿತು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಹುದ್ದೆ ರಹಿತವಾಗಿ ವರ್ಗಾವಣೆಗೊಳಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾಲಯದ ಹಿತಾಸಕ್ತಿಯನ್ನು ಪರಿಗಣನೆಗೆ ತೆಗೆದುಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಬಹುದೆಂದು ಸಭೆಯು ನಿರ್ಣಯಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

8/1/24
ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

8/1/24
ಕುಲಪತಿಗಳು
ಅಧ್ಯಕ್ಷರು